**ಕರ್ನಾಟಕ ಸರ್ಕಾರ**

ಸಂ.ಡಿಟಿಇ/02/ ಆರ್ಇಸಿ/2018-19

ನಿರ್ದೇಶಕರವರ ಕಛೇರಿ,
ತಾಂತ್ರಿಕಶಿಕ್ಷಣ ನಿರ್ದೇಶನಾಲಯ,
ಬೆಂಗಳೂರು-560 001.
ದಿನಾಂಕ:28-07-2018.

-:: **ನೆನಪೋಲೆ**::-

**ವಿಷಯ**:- 2018-19 ನೇ ಸಾಲಿಗೆ ಸಂಸ್ಥೆಯ ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಹಾಗು ನಿಗದಿತ ಅವಧಿಯೊಳಗೆ ಸಲ್ಲಿಸುವ ಬಗ್ಗೆ.

**ಉಲ್ಲೇಖ**:- 1. ಸಂ: ಡಿಟಿಇ 02 ಆರ್ಇಸಿ 2017, ದಿ: 27-12-2017.
2. ಸಂ: ಡಿಟಿಇ 02 ಆರ್ಇಸಿ 2017, ದಿ: 27-12-2017

-*********-

ಮೇಲ್ಕಂಡ ವಿಷಯ ಹಾಗೂ ಉಲ್ಲೇಖ (1) ಸಂಬಂಧಿಸಿದಂತೆ ಈಗಾಗಲೇ ಇಲಾಖೆಯು ಸುತ್ತೋಲೆಯೊಂದನ್ನು ಹೊರಡಿಸಿದ್ದು, ಸದರಿ ಉಲ್ಲೇಖಿತ ಸುತ್ತೋಲೆಯನ್ವಯ ಸಂಸ್ಥೆಯ ಪ್ರಾಂಶುಪಾಲರು ನಿಗದಿತ ಕಾಲಮಿತಿಯೊಳಗಾಗಿ ಸಂಸ್ಥೆಯ ಮಾಹೆವಾರು ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹಿತಿಯನ್ನು ಧೃಢೀಕರಿಸಿ ಸಾಫ್ಟ್ ಕಾಪಿ ಹಾಗೂ ಖಜಾನೆ ನಮೂನೆ-62ಬಿ ಯೊಂದಿಗೆ ಸಹಿತವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಬೇಕಾಗಿರುತ್ತದೆ, ಈ ಬಗ್ಗೆ ಈಗಾಗಲೇ ಉಲ್ಲೇಖ (2) ಪತ್ರದಲ್ಲಿ ತಿಳಿಸಲಾಗಿದ್ದರು ಸಹ ಕೆಲವು ಸಂಸ್ಥೆಗಳಿಂದ ಇಲ್ಲಿಯವರೆವಿಗೂ ಸದರಿ ವಿಷಯದ ಬಗ್ಗೆ ಯಾವುದೇ ಮಾಹಿತಿಯು ಇಲ್ಲಿಯವರೆಗೂ ನಿರ್ದೇಶನಾಲಯದಲ್ಲಿ ಸ್ವೀಕೃತವಾಗಿರುವುದಿಲ್ಲ . ವಿಷಯ ಗಂಭೀರವಾಗಿದ್ದು ಈ **ನೆನಪೋಲೆ ಜ್ಞಾಪನ ಪತ್ರ** ತಲುಪಿದ ಕೂಡಲೇ 2018-19ನೇ ಸಾಲಿನ (**ಏಪ್ರಿಲ್ ತಿಂಗಳಿನಿಂದ ಜೂನ್ ವರೆಗಿನ**) ಮಾಹೆವಾರು ಮಾಹಿತಿಯನ್ನು ಸದರಿ ಸುತ್ತೋಲೆಯೊಂದಿಗೆ ಲಗತ್ತಿಸಿರುವ ಮಾದರಿ ನಮೂನೆಯಂತೆ ಸಿದ್ದಪಡಿಸಿ ಧೃಢೀಕರಿಸಿ ಸಾಫ್ಟ್ ಕಾಪಿ ಹಾಗೂ **ನಮೂನೆ 62ಬಿ** ಸಹಿತ **ತ್ವರಿತ**ವಾಗಿ ನಿರ್ದೇಶನಾಲಯಕ್ಕೆ ಸಲ್ಲಿಸಲು ಸೂಚಿಸಿದೆ, ಇನ್ನು ಮುಂದೆ **ಪ್ರತಿ ತಿಂಗಳ 10ನೇ** ತಾರೀಖಿನೊಳಗೆ ಸಂಸ್ಥೆಯ ಖರ್ಚು-ವೆಚ್ಚ ಹಾಗು ಸ್ವೀಕೃತಿಯ ಮಾಹೆವಾರು ಮಾಹಿತಿಯನ್ನು ನಿಗದಿತ ನಮೂನೆಯಲ್ಲಿ ಸಿದ್ಧಪಡಿಸಿ ಕಳುಹಿಸುವುದು, ಇಲ್ಲವಾದಲ್ಲಿ ಮುಂದಿನ ಆಗು-ಹೋಗುಗಳಿಗೆ ಆಯಾ ಸಂಸ್ಥೆಯ ಪ್ರಾಂಶುಪಾಲರೇ ನೇರ ಹೊಣೆಗಾರರಾಗಿರುತ್ತಾರೆಂದು ತಿಳಿಸಿದೆ. ಸದರಿ ವಿಷಯಕ್ಕೆ ಸಂಬಂಧಿಸಿದ ಮಾಹಿತಿಯ **SOFT COPY** ಪ್ರತಿಯನ್ನು ಈ ಕೆಳಕಂಡ ಇ-ಮೇಲ್ ವಿಳಾಸ recaccdte@gmail.com ಗೆ ಕಳುಹಿಸಲು ತಿಳಿಸಿದೆ.

**ಲೆಕ್ಕಾಧಿಕಾರಿಗಳು(ಬಿಲ್ಸ್)**

ಇವರಿಗೆ:

ಎಲ್ಲಾ ಸರ್ಕಾರಿ / ಇಂಜಿನಿಯರಿಂಗ್/ ಪಾಲಿಟೆಕ್ನಿಕ್/ ಕಿರಿಯ ತಾಂತ್ರಿಕಶಾಲೆಗಳ ಪ್ರಾಚಾರ್ಯರಿಗೆ.

ಪ್ರತಿ:

1.ಇ-ಆಡಳಿತ ವಿಭಾಗ, ತಾಂತ್ರಿಕ ನಿರ್ದೇಶನಾಲಯ ಬೆಂಗಳೂರು (ಇಲಾಖಾ ವೆಬ್‌ಸೈಟ್‌ನಲ್ಲಿ ಪ್ರಕಟಿಸಲು)
2.ಕಛೇರಿ ಪ್ರತಿ.